ಶ್ರೀ ಹೆಚ್.ಸಿ. ಶ್ರೀಕಂಠಯ್ಯ.— ದಿನಗೂಲಿ ಮೇಲೆ ನೇಮಕ ಮಾಡಿಕೊಂಡಾಗ ಹಣ ಖರ್ಚಾಗುತ್ತದೆ. ಅಲ್ಲಿ ಮಂಜೂರಾಗಿರತಕ್ಕ ಹುದ್ದೆಗಳು ಎಷ್ಟು ಇರುತ್ತವೆ ಅದಕ್ಕೆ ಕಾನೂನು ಅನುಸರಿಸಿ ಭರ್ತಿ ಮಾಡಬೇಕಾಗಿರುತ್ತದೆ. ಈ ರೀತಿ ದಿನಗೂಲಿ ಮೇಲೆ ಅಪಾಯಿಂಟ್ ಮಾಡಬೇಕಾದರೆ ಯಾರನ್ನೂ ಕೇಳಬೇಕಾಗಿಲ್ಲ. ಕೆಲಸ ಜಾಸ್ತಿಯಾದಂತಹ ಸಂದರ್ಭದಲ್ಲಿ ದಿನಗೂಲಿ ಮೇಲೆ ನೇಮಕ ಮಾಡಿಕೊಂಡು ಕೆಲಸ ಮುಗಿದಮೇಲೆ ಅವರನ್ನು ಮನೆಗೆ ಕಳುಹಿಸಬಹುದು. ದಿನಗೂಲಿ ಮಾಡಿರತಕ್ಕವರನ್ನು ಖಾಯಂ ಮಾಡಿ ಅಂದರೆ ಅದು ಸಾಧ್ಯವೇ?

ಶ್ರೀ ಜಿ.ಬಿ. ಶಂಕರರಾವ್.— ಸ್ವಾಮಿ, ನಗರಸಭೆಯವರು ನಿಮಗೆ ಖಾಯಂ ಕೆಲಸ ಮಾಡಿಸುತ್ತೇವೆಂದು ಅವರುಗಳಿಂದ ದುಡ್ಡು ಪಡೆದುಕೊಂಡು ನಂತರ ಅವರನ್ನು ಮನೆಗೆ ಕಳುಹಿಸಿದ್ದಾರೆ. ಇದು ಸರಿಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.— ಇದರ ಸ್ಥಿತಿ ಯಾವರೀತಿ ಇದೆ ಅನ್ನುವುದನ್ನು ಪರಿಶೀಲನೆ ಮಾಡಿ ಅದಕ್ಕೆ ಯಾವರೀತಿ ಕೆಲಸ ಮಾಡಬೇಕೋ ಅದನ್ನು ಮಾಡುತ್ತೇನೆ.

Upgrading the Primary Health Centre, Siruguppa

448 SRI B.E. RAMAIAH (Siruguppa)—

Will the Minister for Health and Family Welfare be pleased to state.—

(a) whether the Government has received any represe tation to upgrade primary Health Centre of Siruguppa to 50 bedded Hospital ;

(b) if so, action taken by the Government to upgrade the Primary Health Centre ?

SRI M.MALLAPPA (Minister for Health and Family Welfare).—

(a) Yes.

(b) When Taluk Headquarters Hospitals are to be upgraded to a standard Bed strength this will also be kept in view.

ಶ್ರೀ ಬಿ.ಇ. ರಾಮಯ್ಯ.— ಸ್ವಾಮಿ, ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆಗಳನ್ನು ಯಾವಾಗ ಅಪ್‌ಗ್ರೇಡ್ ಮಾಡುತ್ತೀರಾ?

† ಶ್ರೀ ಎಂ ಮಲ್ಲಪ್ಪ:– ವರ್ಷೇ ವರ್ಷೇ ಇವುಗಳನ್ನು ಅಪ್‌ಗ್ರೇಡ್ ಮಾಡಬೇಕಾದ್ದು ಸರ್ಕಾರದ ನೀತಿ. ಎಲ್ಲವನ್ನೂ ಒಂದೇ ಸಾರಿ ಮಾಡಲಿಕ್ಕೆ ಆಗುವುದಿಲ್ಲ. ಇದರ ಬಗ್ಗೆ ಹಣಕಾಸಿನ ಸೌಲಭ್ಯವನ್ನು ನೋಡಿಕೊಂಡು ಮಾಡುತ್ತೇವೆ. ಇದಕ್ಕೆ೧೯೮೦ರಲ್ಲಿ ೧೯ಲಕ್ಷ ೨೦ಸಾವಿರ ರೂಪಾಯಿಗಳನ್ನು ಒದಗಿಸಿದ್ದೇವೆ ಅದರಲ್ಲಿ ೧೫ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸುವೇಕೆಂದು ಸರ್ಕಾರದ ಉದ್ದೇಶವಿದೆ.

ಶ್ರೀ ಬಿ.ಇ. ರಾಮಯ್ಯ.— ಸ್ವಾಮಿ, ಸಿರಗುಪ್ಪಾ ಆಸ್ಪತ್ರೆಗೆ ಅಲ್ಲಿಯ ಮುನಿಸಿಪಾಲಿಟಿಯವರ ೮೦ ಸಾವಿರ ರೂಪಾಯಿ ಬೆಲೆ ಬಾಳುವ ಬಿಲ್ಡಿಂಗ್ ಕೊಟ್ಟಿದ್ದಾರೆ. ಎಕ್ಸೆರೇ ಯೂನಿಟ್ ಇರುತ್ತದೆ ಅದುದರಿಂದ ಈ ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡಲಿಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ಮಲ್ಲಪ್ಪ:— ಆ ಬಗ್ಗೆ ಜಿಲ್ಲಾ ಆರೋಗ್ಯ ಅಧಿಕಾರಿಗಳು ಸರ್ಕಾರಕ್ಕೆ ಒಂದುವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಈಗ ೧೯೭೯—೮೦ರಲ್ಲಿ ೧೫ ಆಸ್ಪತ್ರೆಗಳನ್ನು ಅಪ್‌ಗ್ರೇಡ ಮಾಡಬೇಕೆಂದು ಇದೆ. ಅದರಲ್ಲಿ ಸಿರಗುಪ್ಪ ಆಸ್ಪತ್ರೆಗಳನ್ನು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು.— ಮಾನ್ಯ ಸದಸ್ಯರಾದ ಎಂ.ಸಿ. ಬಸಪ್ಪನವರ ಪ್ರಶ್ನೆನಂ. ೫೯೩ ತಡೆ ಹಿಡಿಯಲಾಗಿದೆ ಇಲ್ಲಿಗೆ ಪ್ರಶ್ನೋತರಗಳ ವೇಳೆ ಮುಗಿಯಿತು